

ಶಾಲೆಯ ಆರನೆಯ ತರಗತಿಗೆ ಬಂದ ಗಣಿತದ ಮೇಷ್ಟ್ರ ಮೂಗಿಗೆ ಅಂದು ವಾಸನೆ ಬಡಿದಿತ್ತು.

ಇನ್ನೇನು ಸ್ಕೇಲು ಹಿಡಿದು ಬಾರಿಸಿಯೇ ಬಿಡುತ್ತಾರೆ ಎಂದು ಗದರಿಸುತ್ತ ವಿದ್ಯಾರ್ಥಿಗಳತ್ತ ಪ್ರಶ್ನೆಗಳ ಸುರಿಮಳೆಯನ್ನು ಸುರಿಸಿದರು. ಇನ್ನೇನು ಪೆಟ್ಟು ಬಿದ್ದೇ ಬಿಟ್ಟಿತು ಎಂಬ ಭಯದಲ್ಲಿ ಶರತ್ ಕುಮಾರ ಹೇಳಿದ:

‘ಗೋಪಾಲ ನಿನ್ನೆ ಗದ್ದೆಯಲ್ಲಿ ಮೀನು ಹಿಡಿಯುತ್ತಿದ್ದ’.

ಮೇಷ್ಟ್ರು, ‘ಗೋಪಾಲ, ನೀನು ನಿನ್ನೆ ಮೀನು ಹಿಡಿದು ತಿಂದೆಯನೋ’ ಎಂದು ಕೇಳಿಯೇ ಬಿಟ್ಟರು.

ಮೀನು ತಿನ್ನುವುದು ಎಂಬ ಮಾತೇ ಗೋಪಾಲನಿಗೇನು, ಇತರ ಅನೇಕರಿಗೆ ವಾಕರಿಗೆ ಬರುವಂತಿತ್ತು. ಮೀನನ್ನು ತಿನ್ನುತ್ತಾರೇನು? ನಾಯಿ, ಬೆಕ್ಕುಗಳು ಮೀನು ತಿನ್ನುವಂತೆ ಮನುಷ್ಯರು ತಿನ್ನುವುದಿಲ್ಲ ಎಂದು ಮೇಷ್ಟ್ರಿಗೆ ಗೊತ್ತಿಲ್ಲವೇನು? ಗೊತ್ತಿದ್ದೂ ಮನುಷ್ಯರಲ್ಲೂ ಮೀನನ್ನು ಆಹಾರವಾಗಿ ಸ್ವೀಕರಿಸುವವರನ್ನು ನಾಯಿ, ಬೆಕ್ಕುಗಳಂತೆ ಪರಿಗಣಿಸಿದ್ದಾರೇನು? ಮೀನನ್ನು ಪದಾರ್ಥ ಮಾಡಿ ತಿನ್ನುತ್ತಾರೆ ಹೊರತು ಹಸಿಯಾಗಿ ತಿನ್ನುವುದಿಲ್ಲ ಎಂಬುದನ್ನು ಮೇಷ್ಟರಿಗೆ ಹೇಳುವವರು ಯಾರು? ಇದು ಮುಗ್ಧ ವಿದ್ಯಾರ್ಥಿಗಳ ಮನಸ್ಸನ್ನು